

ಚಿಕ್ಕಣ್ಣ', 'ಭಲೇ ಬಸವ', 'ಊರಿಗೆ ಉಪಕಾರಿ', 'ರೌಡಿ ರಂಗಣ್ಣ' ಚಿತ್ರಗಳಲ್ಲಿ ತುಂಟ ಹೆಣ್ಣಾಗಿ, 'ಕಸ್ತೂರಿ ನಿವಾಸ', 'ಚಕ್ರತೀರ್ಥ', 'ಮನಸ್ಸಿದ್ದರೆ ಮಾರ್ಗ' ಚಿತ್ರಗಳಲ್ಲಿ ಗಂಭೀರ ಪಾತ್ರಗಳಲ್ಲಿ ನಟಿಸಿದ ಅವರು ಒಂದೇ ಬಗೆಯ ಇಮೇಜ್‌ಗೆ ಕಟ್ಟುಬೀಳಲಿಲ್ಲ. ವಿವಾಹ ಬಾಹಿರ ಸಂಬಂಧಕ್ಕೆ ಹಾತೊರೆವ ಹೆಣ್ಣಿನ ಪಾತ್ರದ 'ಎಡಕಲ್ಲು ಗುಡ್ಡದ ಮೇಲೆ' ಜಯಂತಿ ವೃತ್ತಿಜೀವನದ ಪ್ರಮುಖ ಚಿತ್ರಗಳಲ್ಲೊಂದು.

## ಪ್ರತಿಭೆಯೇ ಬಂಡವಾಳ

ಕಲ್ಪನಾ, ಭಾರತಿ ಮತ್ತು ಜಯಂತಿ ಅವರ ಸಾಲಿನಲ್ಲೇ ನೆನಪಿಸಿಕೊಳ್ಳ–ಬೇಕಾದ ಕಲಾವಿದೆ ಆರತಿ. ಪುಟ್ಟಣ್ಣ ಕಣಗಾಲರ ಅನೇಕ ಚಿತ್ರಗಳಲ್ಲಿ ನಟಿಸಿದ ಆರತಿ, ಕಲ್ಪನಾ ಅವರಂತೆಯೇ ಸಾಧಾರಣ ರೂಪಿನ, ಪ್ರತಿಭೆಯಿಂದಲೇ ಸಹೃದಯರ ಗಮನಸೆಳೆದ ನಟಿ. 'ಗೆಜ್ಜೆಪೂಜೆ' ಚಿತ್ರದ ಸಣ್ಣಪಾತ್ರದಲ್ಲೂ ತನ್ನ ಛಾಪು ಮೂಡಿಸಿದ ನಟಿ ಅವರು. 'ನಾಗರಹಾವು' ಚಿತ್ರದಲ್ಲಿ 'ಕಥೆ ಹೇಳುವೆ ನನ್ನ ಕಥೆ ಹೇಳುವೆ' ಎಂದು ಅಳಲು ತೋಡಿಕೊಳ್ಳುವ ಅಲಮೇಲು, 'ಶುಭಮಂಗಳ' ಚಿತ್ರದ 'ಈ ಶತಮಾನದ ಮಾದರಿ ಹೆಣ್ಣು' ಎಂದು ಹಾಡುವ ಹೇಮಾ ಕನ್ನಡ ಸಿನಿಮಾದ ಅನನ್ಯ ಸ್ತ್ರೀ ಪಾತ್ರಗಳು. 'ಉಪಾಸನೆ' ಚಿತ್ರದ ಸಂಗೀತ ವಿದ್ಯಾರ್ಥಿನಿ, 'ಎಡಕಲ್ಲು ಗುಡ್ಡದ ಮೇಲೆ' ಚಿತ್ರದಲ್ಲಿನ ಸಂಯಮದ ಹೆಣ್ಣು, 'ಬಿಳಿಹೆಂಡ್ತಿ' ಚಿತ್ರದ ತ್ಯಾಗಮಯಿ, 'ಧರ್ಮಸೆರೆ'ಯ ಮೂಕಹಕ್ಕಿ, 'ರಂಗನಾಯಕಿ'ಯ ಅಭಿನೇತ್ರಿ – ಹೀಗೆ, ಆರತಿ ಜೀವತುಂಬಿದ ಬಹುತೇಕ ಪಾತ್ರಗಳು ಕನ್ನಡ ಸಿನಿಮಾ ಇತಿಹಾಸದ ಮರೆಯಲಾಗದ ಪಾತ್ರಗಳಾಗಿವೆ.

ಬಿ. ಸರೋಜಾದೇವಿ ದಕ್ಷಿಣಭಾರತದ ಚಿತ್ರರಂಗದಲ್ಲಿ ಜನಪ್ರಿಯತೆ ಗಳಿಸಿದ ಅಭಿನೇತ್ರಿ. 'ಅಣ್ಣತಂಗಿ', 'ಅಮರಶಿಲ್ಪಿ ಜಕಣಾಚಾರಿ', 'ಕಿತ್ತೂರು ಚೆನ್ನಮ್ಮ', 'ಭಾಗ್ಯವಂತರು'ಅವರ ಪ್ರಸಿದ್ಧ ಚಿತ್ರಗಳು.

'ವೀರಕೇಸರಿ' ಚಿತ್ರದಲ್ಲಿನ ಅಹಂಕಾರದ ಹೆಣ್ಣು, 'ಕುಲವಧು' ಸಿನಿಮಾದಲ್ಲಿನ ಪರಿತ್ಯಕ್ತ ಮಹಿಳೆ, 'ಗೆಜ್ಜೆಪೂಜೆ' ಚಿತ್ರದಲ್ಲಿ ನಾಯಕಿಯ ಅಮ್ಮನಾಗಿ ಭಾವಪೂರ್ಣ ನಟನೆ ನೀಡಿದ ಲೀಲಾವತಿ ಕೂಡ ಕನ್ನಡದ ವಿಶಿಷ್ಟ ಕಲಾವಿದೆ. 'ಎರಡು ಕನಸು', 'ಮೂರೂವರೆ ವಜ್ರಗಳು', 'ಸಂಪತ್ತಿಗೆ ಸವಾಲ್', 'ಭಕ್ತ ಕುಂಬಾರ', 'ದಾರಿ ತಪ್ಪಿದ ಮಗ', 'ಶ್ರೀನಿವಾಸ ಕಲ್ಯಾಣ', 'ಮಯೂರ', 'ಪಟ್ಟಣಕ್ಕೆ ಬಂದ ಪತ್ನಿಯರು', 'ಪಾಯಿಂಟ್ ಪರಿಮಳ', 'ಸೊಸೆ ತಂದ ಸೌಭಾಗ್ಯ', 'ಬಂಗಾರದ ಗುಡಿ', 'ಬೆಸುಗೆ' ಚಿತ್ರಗಳ ಮಂಜುಳಾ ನಾಯಕಿಯರ ಪಂಕ್ತಿಯಲ್ಲಿ ತಮ್ಮದೇ ಶೈಲಿ ರೂಢಿಸಿಕೊಂಡ ನಟಿ.

ಕಲ್ಪನಾ, ಆರತಿ, ಭಾರತಿ ಸೇರಿದಂತೆ ಅರವತ್ತು, ಎಪ್ಪತ್ತರ ದಶಕದ ನಾಯಕಿಯರು ಬಂಡಾಯ ಮನೋಧರ್ಮದ, ವಿಮೋಚನೆಗಾಗಿ ಹಂಬಲಿಸಿದ ಪಾತ್ರಗಳಲ್ಲಿ ನಟಿಸಿದರು. ಈ ಪಾತ್ರಗಳಿಗೆ ತ್ರಿವೇಣಿ, ಎಂ.ಕೆ. ಇಂದಿರಾ, ಆರ್ಯಾಂಬ ಪಟ್ಟಾಭಿ ಅವರಂಥ ಲೇಖಕಿಯರ ಕಾದಂಬರಿಗಳು ಒತ್ತಾಸೆ–ಯಾದವು. ಆದರೆ ಬಹುತೇಕ ಸಂದರ್ಭಗಳಲ್ಲಿ ಈ ಪಾತ್ರಗಳು, ಆರಂಭದಲ್ಲಿ ಭಿನ್ನ ಹಾದಿ ತುಳಿದರೂ ಕೊನೆಗೆ ಸಾಂಪ್ರದಾಯಿಕ ಚೌಕಟ್ಟಿನಿಂದ ಪಾರಾಗು–ವಲ್ಲಿ ವಿಫಲವಾಗುತ್ತಿದ್ದವು. ಜಯಂತಿ ಅಭಿನಯದ 'ಮಿಸ್ ಲೀಲಾವತಿ' ಕಥನವನ್ನು ನೋಡಿದರೆ – ವಿವಾಹ ವ್ಯವಸ್ಥೆಯನ್ನು ಧಿಕ್ಕರಿಸುವ ನಾಯಕಿ, ಕೊನೆಗೆ ತನ್ನ ನಿರ್ಧಾರದ ಬಗ್ಗೆ ಪಶ್ಚಾತ್ತಾಪ ತಾಳುತ್ತಾಳೆ. ನಮ್ಮ ಸಮಾಜದ ರೂಢಿ–ಚೌಕಟ್ಟುಗಳನ್ನು ಉಲ್ಲಂಘಿಸದೇ ಹೋದರೂ, ಪ್ರತಿಭಟನೆಯ ದನಿಯೊಂದನ್ನು ದಾಖಲಿಸಿರುವುದು ಹಾಗೂ ಹೊಸ ಯೋಚನಾ ಧಾಟಿಗೆ ಅವಕಾಶ ಕಲ್ಪಿಸಿರುವುದು ಈ ಪಾತ್ರಗಳ ಮಹತ್ವವೆಂದು ಹೇಳಬೇಕು. ಇಲ್ಲಿ 'ಎರಡು ಮುಖ', 'ಹಣ್ಣೆಲೆ ಚಿಗುರಿದಾಗ', 'ಉಯ್ಯಾಲೆ'ಯಂಥ ಕಲಾಕೃತಿ–ಗಳನ್ನು ನೆನಪಿಸಿಕೊಳ್ಳಬೇಕು. ಎಂ.ಆರ್. ವಿಠಲ್‌ರ 'ಎರಡು ಮುಖ' ಕನ್ನಡದ ಮೊದಲ ಮನೋವೈಜ್ಞಾನಿಕ ಚಿತ್ರ. ಸೀಳು ವ್ಯಕ್ತಿತ್ವದ ಹೆಣ್ಣಿನ ಪಾತ್ರವನ್ನು ಜಯಂತಿ ಈ ಚಿತ್ರದಲ್ಲಿ ಸಮರ್ಥವಾಗಿ ನಿಭಾಯಿಸಿದ್ದರು.

ತೊಂಬತ್ತರ ದಶಕದ ನಂತರದ ಚಿತ್ರಗಳಲ್ಲಿ ಸ್ತ್ರೀಪಾತ್ರಗಳ ಪ್ರಾಮುಖ್ಯತೆ ಕಡಿಮೆಯಾಗುತ್ತಾ ಬಂದಿದೆ. ದೀರ್ಘ ಕಾಲ ಉಳಿದು, ಜನಮಾನಸದ ಮೇಲೆ ಪ್ರಭಾವ ಬೀರಿದ ನಟಿಯರು ಅಪರೂಪ ಎಂದೇ ಹೇಳಬೇಕು. ಸುಧಾರಾಣಿ ಗಮನಾರ್ಹ ಪಾತ್ರಗಳಲ್ಲಿ ನಟಿಸಿದರೂ, ವೃತ್ತಿ ಜೀವನದ ಮಹತ್ವದ ಘಟ್ಟದಲ್ಲಿ ಅವರು ಚಿತ್ರರಂಗಕ್ಕೆ ಬೆನ್ನುಹಾಕಿದರು. ಪ್ರತಿಭಾವಂತ ನಟಿ ಶ್ರುತಿ ಅವರಿಗೆ ಗೋಳಿನ ಪಾತ್ರಗಳೇ ಹೆಚ್ಚಾಗಿ ದೊರೆತವು. ಇವರಿಬ್ಬರಿಗೆ ಹೋಲಿಸಿದರೆ ಮಾಲಾಶ್ರೀ ಮುಂಚೂಣಿಯಲ್ಲಿ ನಿಲ್ಲುತ್ತಾರೆ. 'ನಂಜುಂಡಿ ಕಲ್ಯಾಣ' ಚಿತ್ರ ಮಾಲಾಶ್ರೀ ಅವರಿಗೆ ಜನಪ್ರಿಯತೆ ತಂದುಕೊಟ್ಟಿತು. 'ಗಜಪತಿ ಗರ್ವಭಂಗ', 'ಹೃದಯ ಹಾಡಿತು', 'ರಾಮಾಚಾರಿ', 'ರಾಣಿ ಮಹಾರಾಣಿ' ಚಿತ್ರಗಳು ಬಹುದೊಡ್ಡ ಯಶಸ್ಸು ಗಳಿಸಿದವು.

## ಆಕರ್ಷಕ ಹೊಸಚಿಗುರು

ಸಿನಿಮಾದ ಗ್ಲಾಮರ್ ಅಗತ್ಯಗಳನ್ನು ತುಂಬಲು ಬಳಕೆಯಾಗುತ್ತಿರುವ ನಾಯಕಿಯರು ಪ್ರಸಕ್ತ ಚಿತ್ರರಂಗದಲ್ಲಿ ಸರಕಿನ ರೂಪವಾಗಿ ಕಾಣಿಸುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಗಟ್ಟಿ ಪಾತ್ರಗಳನ್ನು ನಾಯಕಿಯೊಬ್ಬಳು ನಿರೀಕ್ಷಿಸುವುದು ಕಷ್ಟ. ಈ ಪ್ರತಿಕೂಲ ಸಂದರ್ಭದಲ್ಲೂ ಕೆಲವು ಕಲಾವಿದೆಯರು ತಮಗೆ ದೊರೆತ ಸೀಮಿತ ಅವಕಾಶಗಳಲ್ಲೇ ಚಿತ್ರರಸಿಕರ ಗಮನಸೆಳೆದಿದ್ದಾರೆ. 'ಮೊಗ್ಗಿನ ಮನಸು', 'ಲವ್ ಗುರು', 'ಡ್ರಾಮಾ' ಚಿತ್ರಗಳು ನಟಿಯಾಗಿ ರಾಧಿಕಾ ಪಂಡಿತ್ ಅವರನ್ನು ಗಮನಿಸಬೇಕಾದ ಪ್ರಯತ್ನಗಳು. 'ಯು ಟರ್ನ್' ಚಿತ್ರದ ಶ್ರದ್ಧಾ ಶ್ರೀನಾಥ್, 'ಬ್ಯೂಟಿಫುಲ್ ಮನಸುಗಳು' ಚಿತ್ರದ ಶ್ರುತಿ ಹರಿಹರನ್, 'ಕೆಂಡಸಂಪಿಗೆ'ಯ ಮಾನ್ವಿತಾ ಹರೀಶ್ ಗಮನಿಸಬೇಕಾದ ಕಲಾವಿದೆಯರು.

'ತಾಯಿಸಾಹೇಬ'ದ ಜಯಮಾಲಾ ಹಾಗೂ 'ದ್ವೀಪ' ಚಿತ್ರದ ಸೌಂದರ್ಯಾ ತಮ್ಮ ಅಭಿರುಚಿ ಹಾಗೂ ಮಹತ್ವಾಕಾಂಕ್ಷೆಯ ಕಾರಣ–ದಿಂದಲೂ ಮುಖ್ಯರಾದವರು. ಹಾಸ್ಯಪಾತ್ರಗಳಿಗೆ ಸೀಮಿತರಾಗಿದ್ದ ಉಮಾಶ್ರೀ 'ಗುಲಾಬಿ ಟಾಕೀಸ್'ನ ಗುಲಾಬಿ ಪಾತ್ರಕ್ಕೆ ರಾಷ್ಟ್ರಪ್ರಶಸ್ತಿ ಪಡೆಯುವ ಮೂಲಕ ತಮ್ಮ ಅಭಿನಯ ಸಾಮರ್ಥ್ಯವನ್ನು ದೊಡ್ಡಮಟ್ಟದಲ್ಲಿ ಸಾಬೀತು ಪಡಿಸಿದ್ದರು.

ತೆರೆಯ ಹಿಂದೆ ಮಹಿಳೆಯರ ಸಾಧನೆ ಕಡಿಮೆಯೇನಲ್ಲ. ಪ್ರೇಮಾ ಕಾರಂತ್ ನಿರ್ದೇಶನದ 'ಫಣಿಯಮ್ಮ', ಕವಿತಾ ಲಂಕೇಶ್‌ರ 'ಅವ್ವ', ಸುಮನಾ ಕಿತ್ತೂರು ನಿರ್ದೇಶನದ 'ಎದೆಗಾರಿಕೆ' ಹಾಗೂ 'ಕಿರಗೂರಿನ ಗಯ್ಯಾಳಿಗಳು' ಕನ್ನಡ ಮಾತ್ರವಲ್ಲದೆ, ಭಾರತೀಯ ಚಿತ್ರರಂಗದಲ್ಲೂ ವಿಶಿಷ್ಟ ಪ್ರಯೋಗಗಳು.

ಎಂಟೂವರೆ ದಶಕಗಳ ಕನ್ನಡ ಚಿತ್ರಚರಿತ್ರೆಗೆ ಹೆಣ್ಣುಮಕ್ಕಳ ಸಿನಿಮಾ ಸಾಧನೆ ಹೊಸ ಹೊಳಪು ಹಾಗೂ ಗೌರವವನ್ನು ತಂದುಕೊಡುವಂತಹದ್ದು. ನಾಯಕರು, ನಿರ್ದೇಶಕರ ಬಗ್ಗೆ ಮಾತನಾಡುವಾಗ ಅವರ ತಾರಾ ಪ್ರಭಾವಳಿಯೇ ಮುಖ್ಯವಾಗುತ್ತದೆ. ಆದರೆ, ಮಹಿಳಾ ಸಾಧಕಿಯರ ಕುರಿತ ಮಾತು ಪೊರೆಯುವ ರಚನಾತ್ಮಕ ಗುಣವನ್ನು ಹೊಂದಿದೆ. ●


ಶ್ರದ್ಧಾ ಶ್ರೀನಾಥ್


ಶ್ರುತಿ ಹರಿಹರನ್


ಮಾಲಾಶ್ರೀ